# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 770 (982)
ಸದಸ್ಯರ ಹೆಸರು : ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ : 11.03.2026
ಉತ್ತರಿಸುವ ಸಚಿವರು : ಕಂದಾಯ ಸಚಿವರು.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಹಲವು ಗ್ರಾಮಗಳಲ್ಲಿ ರೈತರ ಹೊಲಗಳಿಗೆ ತೆರಳಲು ಇರುವ ಕಾವಲುದಾರಿ ಮತ್ತು ಬಂಡಿ ಜಾಡು ರಸ್ತೆಯನ್ನು ಕೆಲವು ಭೂ ಮಾಲೀಕರು ಒತ್ತುವರಿ ಮಾಡಿಕೊಂಡು ರೈತರಿಗೆ ತೊಂದರೆ ನೀಡುವುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಸರ್ಕಾರದ ಗಮನಕ್ಕೆ ಬಂದಿದೆ. |
| ಆ) | ಸದರಿ ಒತ್ತುವರಿಯನ್ನು ತೆರವುಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ನಕಾಶೆ ಕಂಡ ಕಾಲುದಾರಿ, ಬಂಡಿದಾರಿ ಅಥವಾ ರಸ್ತೆಗಳಲ್ಲಿ ಅನ್ಯ ಕೃಷಿ ಬಳಕೆದಾರರು ತಿರುಗಾಡಲು ಅವಕಾಶ ನೀಡದೆ ಅಡ್ಡಿಪಡಿಸುವಂತಹ ಅಥವಾ ಬಳಸಲು ಮುಚ್ಚಿರುವಂತಹ ಸಂದರ್ಭದಲ್ಲಿ ಅವುಗಳನ್ನು ತೆರವುಗೊಳಿಸಿ ಅಂತಹ ದಾರಿಗಳನ್ನು ಸುಗಮಗೊಳಿಸಲು ಕ್ರಮವಹಿಸುವಂತೆ ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್.ಡಿ. 23 ಎಲ್.ಜಿ.ಪಿ. 2022, ದಿನಾಂಕ: 20.10.2023 ರಲ್ಲಿ ಎಲ್ಲಾ ತಹಶೀಲ್ದಾರರಿಗೆ ನಿರ್ದೇಶನ ನೀಡಲಾಗಿದೆ |
| ಇ) | ಕೆಲವು ಹೊಲಗಳಿಗೆ ತೋಟಗಳಿಗೆ ನಕಾಶೆ ರಸ್ತೆಯೇ ಇಲ್ಲದ ಕಾರಣ ಅವರು ತೋಟಕ್ಕೆ ಕೃಷಿ ಸಲಕರಣೆ, ಗೊಬ್ಬರ, ತೋಟದ ಬೆಳಗಳ ಸಾಗಾಟಕ್ಕೆ ತೊಂದರೆ ಅನುಭವಿಸುತ್ತಿದ್ದು, ಇದಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ; | ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 59ರಲ್ಲಿ ದಾರಿ ಹಕ್ಕುಗಳು ಮತ್ತು ಇತರ ಅನುಭೋದ ಹಕ್ಕುಗಳ ಬಗ್ಗೆ ತಿಳಿಸಲಾಗಿದ್ದು, ಸಂಬಂಧಪಟ್ಟ ಜಮೀನುಗಳ ಭಾಗಿದಾರರು ಒಪ್ಪಿರುವಂತೆ ಸಂದರ್ಭದಲ್ಲಿ ಹಕ್ಕುಗಳ ದಾಖಲೆ ರಿಜಿಸ್ಟರ್‌ನಲ್ಲಿ ನಮೂದು ಮಾಡಲು ಅವಕಾಶವಿರುತ್ತದೆ. |
| ಈ) | ನಕಾಶೆ ರಸ್ತೆಯೇ ಇಲ್ಲದ ಜಮೀನಿಗೆ ರಸ್ತೆ ಸೌಲಭ್ಯ ಒದಗಿಸಲು ಜಮೀನಿನಲ್ಲಿ ಇರುವ ಖರಾಬು ಉಪಯೋಗಿಸಬಹುದೇ : (ಸುತ್ತೋಲೆ / ಆದೇಶದ ಪ್ರತಿಯೊಂದಿಗೆ ವಿವರವಾದ ಮಾಹಿತಿ ನೀಡುವುದು) | |
| ಉ) | ರೈತರು ಭೂಮಿ ಮಾರುಕಟ್ಟೆಯ ಬೆಲೆ ನೀಡಿದ್ದಲ್ಲಿ, ಹೊಲ/ ತೋಟಕ್ಕೆ ರಸ್ತೆಯನ್ನು ಸರ್ಕಾರದ ವತಿಯಿಂದ ಭೂಮಿ ಖರೀದಿಸಿ ರೈತರಿಗೆ ರಸ್ತೆಯನ್ನು ಮಾಡಿಕೊಡಲಾಗುವುದೇ? (ವಿವರ ನೀಡುವುದು) | ಅಂತಹ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. |

ಸಂಖ್ಯೆ: ಆರ್‌ಡಿ 41 ಎಲ್‌ಜಿಕ್ಯೂ 2026

(ಕೃಷ್ಣಬೈರೇಗೌಡ)
ಕಂದಾಯ ಸಚಿವರು